


## ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಪ್ರಜಾವಾಣಿ ಪತ್ರಿಕೆಗೆ 75 ವರ್ಷ ತುಂಬಿದ ಸಂದರ್ಭದಲ್ಲಿ, ‘ಕನ್ನಡ ಸಿನಿ ಸಮ್ಮಾನ’ದ ಮೂಲಕ ಪತ್ರಿಕೆ ಹಾಗೂ ಕನ್ನಡ ಸಿನಿಮಾ ನಂಟಿಗೆ ಹೊಸ ಆಯಾಮ ದೊರೆತಿದೆ. 2023ರ ಜೂನ್ 3ರಂದು ಬೆಂಗಳೂರಿನಲ್ಲಿ ನಡೆದ ‘ಸಿನಿ ಸಮ್ಮಾನ’ದ ಅದ್ದೂರಿ ಕಾರ್ಯಕ್ರಮದಲ್ಲಿ 2022ರಲ್ಲಿ ತೆರೆಕಂಡ ಕನ್ನಡ ಚಿತ್ರಗಳಿಗೆ ಪ್ರಶಸ್ತಿ ಕೊಡುವ ಪರಿಪಾಟಕ್ಕೆ ಚಾಲನೆ ದೊರೆತಂತಾಯಿತು. ಐದಾರು ವರ್ಷಗಳಿಂದ ರಾಜ್ಯ ಸರ್ಕಾರದ ಪ್ರಶಸ್ತಿಗಳಿಗೆ ಗ್ರಹಣ ಹಿಡಿದಿರುವ ಸಂದರ್ಭದಲ್ಲಿ ‘ಪ್ರಜಾವಾಣಿ’ ಸಿನಿಮಾ ಪ್ರಶಸ್ತಿ ಆರಂಭಗೊಂಡಿದೆ.

ಗಿರೀಶ ಕಾಸರವಳ್ಳಿ ಅವರನ್ನು ಒಳಗೊಂಡ ಏಳು ಮಂದಿ ಮುಖ್ಯ ತೀರ್ಪುಗಾರರಾಗಿದ್ದರು. ಸಿನಿಮಾದ ವಿವಿಧ ಕ್ಷೇತ್ರಗಳ ಪರಿಣತರು ಹಾಗೂ ವಿಮರ್ಶಕರು ಇದ್ದ 20 ಮಂದಿಯ ತಂಡ ಕೂಡ ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿತ್ತು. 15 ವಿಭಾಗಗಳಲ್ಲಿ ಪ್ರಶಸ್ತಿಗೆ ಯೋಗ್ಯವಾದ ಐದೈದು ಆಯ್ಕೆಗಳನ್ನು ನೀಡಲಾಗಿತ್ತು. ಚಿತ್ರರಂಗದ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರತರಾದವರೇ ವೋಟ್ ಮಾಡಿ, ಆಯಾ ವಿಭಾಗಗಳಲ್ಲಿ ಅರ್ಹರನ್ನು, ಅರ್ಹ ಚಿತ್ರಗಳನ್ನು ಆಯ್ಕೆ ಮಾಡಿದರು. ‘ಜನ ಮೆಚ್ಚಿದ ಸಿನಿಮಾ’, ‘ಜನ ಮೆಚ್ಚಿದ ನಟ’, ‘ಜನ ಮೆಚ್ಚಿದ ನಟಿ’, ‘ಜನ ಮೆಚ್ಚಿದ ಸಂಗೀತ’ – ಈ ವಿಭಾಗಗಳಲ್ಲಿ ಜನರಿಂದಲೇ ವೋಟ್ ಮಾಡಿಸಿ ವಿಜೇತರನ್ನು ಆಯ್ಕೆ ಮಾಡಲಾಯಿತು.



ಸಾಮಾಜಿಕ ಪರಿಣಾಮ ಬೀರಿದ ಅತ್ಯುತ್ತಮ ಚಿತ್ರ, ಅತ್ಯುತ್ತಮ ನಿರ್ಮಾಣ ವಿನ್ಯಾಸ, ಅತ್ಯುತ್ತಮ ವಿಎಫ್‌ಎಕ್ಸ್, ಅತ್ಯುತ್ತಮ ಧ್ವನಿಗ್ರಹಣ – ಈ ವಿಭಾಗಗಳಿಗೆ ಮುಖ್ಯ ತೀರ್ಪುಗಾರರು ಅರ್ಹರನ್ನು ಆಯ್ಕೆ ಮಾಡಿದರು. ವರ್ಷದ ಅತ್ಯುತ್ತಮ ಚಿತ್ರ ಹಾಗೂ ಜನ ಮೆಚ್ಚಿದ ಚಿತ್ರ ಎರಡೂ ವಿಭಾಗಗಳಲ್ಲಿ ‘ಕಾಂತಾರ’ ಚಿತ್ರ ಪ್ರಶಸ್ತಿಗೆ ಆಯ್ಕೆಯಾಯಿತು. ಅತ್ಯುತ್ತಮ ನಟ ಪ್ರಶಸ್ತಿ ದಿವಂಗತ ‘ಸಂಚಾರಿ’ ವಿಜಯ್ ಅವರ ಹೆಸರಿಗೆ ಸಂದಿತು. ಗಾನವಿ ಲಕ್ಷ್ಮಣ್ ಅತ್ಯುತ್ತಮ ನಟಿ ಪ್ರಶಸ್ತಿಗೆ ಆಯ್ಕೆಯಾದರು. ಜನ ಮೆಚ್ಚಿದ ಅತ್ಯುತ್ತಮ ನಟ ಪ್ರಶಸ್ತಿಗೆ ಯಶ್ ಆಯ್ಕೆಯಾದರೆ, ಜನ ಮೆಚ್ಚಿದ ನಟಿ ಪ್ರಶಸ್ತಿಯು ಅದಿತಿ ಪ್ರಭುದೇವ ಅವರ ಪಾಲಾಯಿತು. ಅತ್ಯುತ್ತಮ ನಿರ್ದೇಶನ ಪ್ರಶಸ್ತಿಯು ‘ಕಾಂತಾರ’ ಚಿತ್ರಕ್ಕಾಗಿ ರಿಷಬ್ ಶೆಟ್ಟಿ ಅವರಿಗೆ ಸಂದರೆ, ಅತ್ಯುತ್ತಮ ಚೊಚ್ಚಲ ನಿರ್ದೇಶನ ಪ್ರಶಸ್ತಿಯು ‘ಚಾರ್ಲಿ’ ನಿರ್ದೇಶಿಸಿದ ಕಿರಣ್ ರಾಜ್ ಅವರಿಗೆ ಲಭಿಸಿತು. ‘ಕಾಂತಾರ’ ಹಾಗೂ ‘777 ಚಾರ್ಲಿ’ ಹೆಚ್ಚು ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡವು.

1973 ಮಾತ್ರವಲ್ಲ, ಎಪ್ಪತ್ತರ ದಶಕದ ಯಾವ ವರ್ಷವನ್ನು ಗಮನಿಸಿದರೂ, ಮುಖ್ಯವಾಹಿನಿ ಹಾಗೂ ಕಲಾತ್ಮಕ ಸಿನಿಮಾಗಳ ಸಹಪಯಣ ಕಾಣಿಸುತ್ತದೆ; ಎರಡೂ ಪ್ರಕಾರಗಳ ಸಿನಿಮಾಗಳನ್ನು ಕನ್ನಡ ಪ್ರೇಕ್ಷಕರು ಉತ್ಸಾಹದಿಂದ ಸ್ವಾಗತಿಸಿದ ಉದಾಹರಣೆಗಳೂ ಸಾಕಷ್ಟಿವೆ. ಇದೆಲ್ಲಕ್ಕೂ ಮಿಗಿಲಾಗಿ, ರಾಜ್‌ಕುಮಾರ್‌ರಂಥ ತಾರಾ ವರ್ಚಸ್ಸಿನ ನಟನ ನಾಲ್ಕೈದು ಸಿನಿಮಾಗಳು, ಕೆಲವೊಮ್ಮೆ ಏಳೆಂಟು ಸಿನಿಮಾಗಳು ಒಂದೇ ವರ್ಷ ತೆರೆಕಂಡಿರುವ ಉದಾಹರಣೆಗಳಿವೆ. ರಾಜ್‌ಕುಮಾರ್, ವಿಷ್ಣುವರ್ಧನ್, ಅಂಬರೀಷ್, ಅನಂತನಾಗ್ – ಹೀಗೆ ಜನಪ್ರಿಯ ನಾಯಕನಟರ ಸಿನಿಮಾಗಳು ಒಂದರ ಹಿಂದೊಂದು ತೆರೆಕಾಣುವುದು ಹಾಗೂ ಯಶಸ್ಸು ಕಾಣುವುದು ಕನ್ನಡ ಚಿತ್ರರಂಗದಲ್ಲಿ ಸಾಮಾನ್ಯ ಎನ್ನುವಂತಾಗಿತ್ತು. ನಟನೊಬ್ಬನ ಸಿನಿಮಾ ಯಶಸ್ವಿಯಾಗಿ ಪ್ರದರ್ಶನಗೊಳ್ಳುತ್ತಿರುವಾಗಲೇ, ಆ ಕಲಾವಿದನ ಮತ್ತೊಂದು ಸಿನಿಮಾ ತೆರೆಕಂಡು, ಎರಡೂ ಚಿತ್ರಗಳು ಯಶಸ್ಸು ಕಂಡಿರುವುದಿದೆ. ಈಗ?

### ಬರಿಗೊಡಗಳಿಗೆ ಸಮಾಧಾನ...

‘ಬರಿಗೊಡಗಳಿಗೆ ಸಮಾಧಾನ ಹೇಳುತಿದೆ ನೀರಿಲ್ಲದ ನಲ್ಲಿ, ಮಟ ಮಟ ಮಧ್ಯಾಹ್ನದಲ್ಲಿ...’ ಎನ್ನುವುದು ಕೆ.ಎಸ್. ನರಸಿಂಹ ಸ್ವಾಮಿಯವರ ಪ್ರಸಿದ್ಧ ಕವಿತೆಯೊಂದರ ಸಾಲುಗಳು. ಈ ವಿರೋಧಾಭಾಸ ಈ ಹೊತ್ತಿನ ಕನ್ನಡ ಚಿತ್ರರಂಗಕ್ಕೂ ಅನ್ವಯಿಸುವಂತಹದ್ದು. ಕನ್ನಡ ಚಿತ್ರರಂಗದಲ್ಲೀಗ ಚಾಲ್ತಿಯಲ್ಲಿರುವುದು ಬರಿಗೊಡಗಳ ಮೆರವಣಿಗೆ. ಈ ಬರಿಗೊಡ, ಯಶಸ್ಸಿನ ಸಂಕೇತವಷ್ಟೇ ಅಲ್ಲ, ಗುಣಮಟ್ಟಕ್ಕೆ ಸಂಬಂಧಿಸಿದ್ದೂ ಹೌದು. 2023ರ ಕನ್ನಡ ಚಿತ್ರರಂಗದ ಪ್ರಮುಖ ಆಗುಹೋಗುಗಳನ್ನು ಗಮನಿಸಿದರೆ, ‘ಬರಿಗೊಡ’ದ ರೂಪಕ ಹೆಚ್ಚು ಸ್ಪಷ್ಟವಾಗುತ್ತದೆ.



ಪೃಥ್ವಿ ಕೊಣನೂರು

